ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಹೆಣವನ್ನು ಹೂಳುವುದಕ್ಕೂ, ಸುಡುವುದಕ್ಕೂ ಏನು ವ್ಯತ್ಯಾಸ?*



ಹೂತ ಹೆಣ ಮೆಡಿಕಲ್ ಕಾಲೇಜಲ್ಲಿ ಸ್ಕೆಲಿಟನ್ ಆಗಬಹುದು, ಸುಟ್ಟ ಹೆಣಕ್ಕೆ ಆ ಛಾನ್ಸ್ ಇಲ್ಲ!

ಮಹಾವೀರ ಕಾಸರ, ಶಿವಮೊಗ್ಗ
*ಪ್ರೀತಿಯ ಕುರುಹಾಗಿ ಗುಲಾಬಿ ಹೂವನ್ನೇ ಏಕೆ ಬಳಸುತ್ತಾರೆ?*
ಕೆಂಪು ಕೆನ್ನೆಗೆ, ಜೇನ ಅಧರಕೆ ಮ್ಯಾಚಿಂಗ್ ಆಗುವುದೆಂದು.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ನೀವು ಮತ್ತು ನೀವೇ ಗೆ ಇರುವ ವ್ಯತ್ಯಾಸವೇನು?*
ನೋವಿರುವ ಭಾಗವನ್ನು ಸವರುವವರು ಮಕ್ಕಳಾದರೆ ನೀವು ಎನ್ನುತ್ತೇವೆ, ಹೆಂಡತಿ/ಪ್ರೇಯಸಿ ಆದರೆ ನೀವೇ... !

ವಿ. ವೆಂಕಟಾಚಲ, ಬೆಂಗಳೂರು
*ಬೆಂಗಳೂರಿನ ಕಸದ ವಾಸನೆ ನ್ಯೂಯಾರ್ಕ್‌ಗೆ ಬಡಿದರೂ ನಮ್ಮ ಮಂತ್ರಿಮಂಡಲದ ಮೂಗಿಗೆ ಬಡಿದಿಲ್ಲವೆ?*




ತಿಪ್ಪೆಗೆ ಕಸದ ವಾಸನೆ ಬಡಿಯುವುದಿಲ್ಲ ಸಾರ್!

ಜಯಲಕ್ಷ್ಮೀ, ತುಮಕೂರು
*ಮದುವಣಗಿತ್ತಿಗೂ, ಪಾತರಗಿತ್ತಿಗೂ ಏನು ವ್ಯತ್ಯಾಸ?*
ಮದುವಣಗಿತ್ತಿ ತಂಗಾಳಿ, ಪಾತರಗಿತ್ತಿ ಸುಂಟರಗಾಳಿ!

ಎಂ.ಎನ್.ಸೋಮಶೇಖರ್, ಮೈಸೂರು
*ಚಿರತೆಗೂ, ಬೆಕ್ಕಿಗೂ ಇರುವ ವ್ಯತ್ಯಾಸವೇನು?*
ಬೆಕ್ಕು ಸೊಸೆ, ಅತ್ತೆ ಚಿರತೆ!

ಆರಿಫ್, ದಾವಣಗೆರೆ
*ಕೆಲವು ಆಂಟಿಯರು ಹುಡುಗಿಯರಿಗಿಂತಲೂ ಹೆಚ್ಚಾಗಿ ಅಲಂಕಾರ ಮಾಡಿಕೊಳ್ಳುತ್ತಾರಲ್ಲಾ, ಏಕೆ?*
ಅಂದದೊಂದಿಗೆ ಅಲಂಕಾರವೂ ಇದ್ದರೆ ಅಂಕಲ್ ಅಂಕೆಯಲ್ಲಿರುತ್ತಾನೆಂದು!

ಎಚ್. ಸಿದ್ಧಾರ್ಥ ಹೆಬ್ಬಾರ, ಈದು
*ಫ್ಯೂಚರ್ ಮತ್ತು ನೇಚರ್‌ಗಳಲ್ಲಿ ಯಾವುದರತ್ತ ಹೆಚ್ಚು ಗಮನ ಹರಿಸಬೇಕು?*
ನೇಚರ್‌ನತ್ತ ಗಮನ ಹರಿಸುವುದೇ ನಿಮ್ಮ ನೇಚರ್ ಆದರೆ, ಫ್ಯೂಚರ್ ಚೆನ್ನಾಗಿಯೇ ಇರುತ್ತದೆ.

ಪಿ.ಎನ್.ಶ್ರೀವತ್ಸ, ಬೆಂಗಳೂರು
*ಇದುವರೆಗೂ ಈ ವಿಭಾಗದಲ್ಲಿ ಉತ್ತರಿಸುವವರ ಹೆಸರು ಅವರು ಸತ್ತಮೇಲೆ ತಿಳಿಯುತ್ತದ್ದುದರಿಂದ ನೀವಾದರೂ ಈಗಲೇ...?*
ಕ್ಷಮಿಸಿ. ನಿಮಗೆ ನನ್ನ ಹೆಸರು ತಿಳಿಯಬೇಕೆಂಬ ಏಕೈಕ ಕಾರಣಕ್ಕೆ ನಾನು ಈಗಲೇ ಸಾಯಲು ಸಿದ್ಧನಿಲ್ಲ!

ಹಾಡ್ಯ ಬಿ. ಜಯಾನಂದ, ಮೈಸೂರು
*ಹೆಂಡತಿಯಿಂದ ಆದ ಅನಾಹುತಕ್ಕೂ ಗಂಡಾಂತರ ಎಂದೇ ಹೇಳುತ್ತಾರಲ್ಲಾ, ಸರಿಯೇ?*
ಆ ಮೂದೇವಿ ಸರಿಯಿದ್ದಿದ್ರೆ ನಾನ್ಯಾಕ್ ಹೀಗ್ಯಾಡ್ತಿದ್ದೆ ಎಂದಳಂತೆ ಆ ಹೆಣ್ಣು. ಅನಿಷ್ಟಕ್ಕೆ ಪತಿೀಶ್ವರನೇ ಗುರಿ!

ಬಿ. ಚಂದ್ರೇಗೌಡ, ಬೆಂಗಳೂರು
*ಭೂತದ ಬಾಯಲ್ಲಿ ಭಗವದ್ಗೀತೆ ಎಂದರೇನು?*
ಭವಿಷ್ಯತ್ತಿನಲ್ಲಿ ಕುರುಕ್ಷೇತ್ರ ಎಂದು!

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ
*ಆಸೆಯ ಬಲೆಗೂ, ಮೀನಿನ ಬಲೆಗೂ ಇರುವ ವ್ಯತ್ಯಾಸವೇನು ಗುರೂಜಿ?*
ಮೀನಿನ ಬಲೆಗೆ ಸಿಲುಕಿದ್ದಕ್ಕೆ ತೀರುವ ಭಯ, ಆಸೆಯ ಬಲೆಯಲ್ಲಿ ಸಿಲುಕಿದವರಿಗೆ ತೀರದ ಬಯಕೆ!

ಕುಮಾರ ಚಲವಾದಿ, ಹೊಳೆನರಸೀಪುರ
*ಪತಿಗಿಂತಲೂ ಪತ್ನಿಯೇ ಯಾಕೆ ಕುಳ್ಳಗಿರಬೇಕು?*
ಪತ್ನಿ ಮೊಟಕಲು, ಜುಟ್ಟು ಹಿಡಿಯಲು ಆಗದಿರಲೆಂದು!

## ಬಹುಮಾನಿತ ಪ್ರಶ್ನೆ

ಸಾವಿತ್ರಿ ಜನವಾಡಕರ್, ಗುಲ್ಬರ್ಗಾ
*ಉಪ್ಪು ಹೆಚ್ಚೋ, ಸ್ತ್ರೀ ಹೆಚ್ಚೋ?*
ಅದೇನೋ ಅರಿಯೆ, ಆದರೆ ಎರಡರಿಂದಲೂ ಬಿ.ಪಿ. ಹೆಚ್ಚು!

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
*ಸ್ತ್ರೀಯರು ಸೊಂಟದ ಮೇಲೆಯೇ ಏಕೆ ಬಿಂದಿಗೆ ಹೊತ್ತುಕೊಂಡು ಹೋಗುತ್ತಾರೆ?*
ತುಳುಕು ಬಿಂದಿಗೆಗೆ ಬಳುಕು ಸೊಂಟವೇ ಪ್ರಶಸ್ತ!

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.
*ಕನ್ನಡದ ಹಾಸ್ಯ ಕವಿಗಳಲ್ಲಿ ಬಹಳಷ್ಟು ಮಂದಿ ರಾಮರಿದ್ದಾರೆ. ಅದರಲ್ಲಿ ನೀವು ಎಷ್ಟನೆಯವರು?*
ಕ್ಷಮಿಸಿ; ನನ್ನನ್ನ ಯಾರೂ ಲೆಕ್ಕಕ್ಕೇ ಇಟ್ಟಿಲ್ಲವಾದ್ದರಿಂದ ಹಾಗೆ ಎಣಿಸಿ ಹೇಳಕ್ಕಾಗಲ್ಲ!

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್
*ಎಲ್ಲಾ ಮಠಾಧೀಶರೂ ಮರದ ಪಾದುಕೆಗಳನ್ನೇ ಧರಿಸುತ್ತಾರಲ್ಲಾ, ಏಕೆ?*



ಎಂತಹ ಮಿಂಚಿನ ಬಳ್ಳಿ ಸೋಕಿದರೂ ಗ್ರೌಂಡ್ ಆಗದಿರಲೆಂದು!

ವಿಜಯ್ ನರಹರಿ, ಆಸುಂಡಿ
*ರಾಮ್‌ಜೀ, ನೀವು ಸುಧಾರಕರೋ ಅಥವಾ ಸುಧಾ ಆರಾಧಕರೋ?*
ವಸುಧಾ ಆರಾಧಕ!

ಪಿ.ಜಿ. ರಾಘವೇಂದ್ರ, ಮೈಸೂರು
*ನಿಮ್ಮ ಹೆಸರನ್ನು ಇಲ್ಲೊಬ್ಬ ರಮ್ ಎಂದು ಓದುತ್ತಿದ್ದಾರಲ್ಲಾ...?*
ಉತ್ತರಗಳು ಅವರಿಗೆ ರಮ್‌ನಷ್ಟೇ ಕಿಕ್ ಕೊಟ್ಟಿವೆಯಂತೆ!

ಆರ್. ಮಧುಸೂದನ್, ಹಾಸನ
*ಎಲ್ಲರನ್ನೂ ಕಾಡುವ ನವಗ್ರಹಗಳಿಗೆ ಗ್ರಹಚಾರವೇ ಬರೋದಿಲ್ವ?*
ಬರದೇ ಏನು! ಜೋತಿಷಿಗಳೆಂಬ ಅತಿಕ್ರೂರ ಗ್ರಹಗಳು ಹೆಗಲೇರಿದರೆ ನವಗ್ರಹಗಳು ವಿಲಿವಿಲಿ!

■ ರಾಮ್